SERVICE ABOVE SELF




Rotary
विश्वमित्रः
# ವಿಶ್ವಮಿತ್ರ
# VISHWAMITHRA
Weekly House Bulletin of Rotary Club Shimoga, R.I. Dist. 3182

UNITE FOR GOOD
Rotary
Rtn. Francesco Arezzo
RI President 2025-26

| Rtn. K. Palaksha | Rtn. Anand R. | Rtn. Vishwas Y. | Rtn. M. Madhavachar |
|---|---|---|---|
| District Governor 2025-26 | President, Mob: 99800 93066 | Secretary, Mob : 99800 63180 | Bulletin Editor, Mob: 98862 73495 |

We meet every Wednesday at 6.45p.m. at Rotary Youth Centre, Sowlanga Road, L.B.S.Nagar, Shivamogga- 577 204

ಸಂಪುಟ – 68 ಸಂಚಿಕೆ –44 ದಿನಾಂಕ : 13–05–2026

**ದಿನಾಂಕ: 13.05.2026 ರಂದು ಮೇ ತಿಂಗಳ 2ನೇ ವಾರದ ಸಭೆ. ಅಂದಿನ ಸಭೆಯಲ್ಲಿ ಖ್ಯಾತ ಮನೋವೈದ್ಯರು, ನೃತ್ಯ ಮತ್ತು ಸಾಹಿತ್ಯ ಕ್ಷೇತ್ರಗಳಲ್ಲಿ ತಮ್ಮದೇ ಆದ ಹೆಸರನ್ನು ಪಡೆದಿರುವ ಡಾ.ಕೆ.ಎಸ್. ಪವಿತ್ರಾರವರು ಮುಖ್ಯ ಅತಿಥಿಗಳಾಗಿ ಆಗಮಿಸಿ, ದಿನಾಂಕ: 15.05.2026 ರಂದು ಆಚರಿಸಲ್ಪಡುವ ಅಂತರರಾಷ್ಟ್ರೀಯ ವಿಶ್ವಕುಟುಂಬ ದಿನಾಚರಣೆ ಪ್ರಯುಕ್ತ 'ಮನೆ ಎಂಬ ತಾಣದ ಸುತ್ತ–ಮುತ್ತ' ಎಂಬ ವಿಚಾರವಾಗಿ ಮಾತನಾಡಿ, ಆಗಮಿಸಿದ್ದ ರೋಟರಿ ಸದಸ್ಯರುಗಳಿಗೆ ಉತ್ತಮವಾದ ಚಿಂತನೆಗೆ ದಾರಿ ಮಾಡಿದರು. ಅಂದಿನ ಸಭೆಯ ವೇದಿಕೆಯಲ್ಲಿ ಇವರೊಂದಿಗೆ ನಮ್ಮ ಅಧ್ಯಕ್ಷರಾದ ರೊ.ಆರ್.ಆನಂದ್ ಮತ್ತು ಕಾರ್ಯದರ್ಶಿ ರೊ.ವಿಶ್ವಾಸ್ ಎಲಬುರ್ಗಿಯವರು ಇದ್ದರು. ಸಾರ್ಜೆಂಟ್ ರೊ.ಎಸ್. ಮಂಜುನಾಥರವರು ಅಧ್ಯಕ್ಷರಿಗೆ ಕಾಲರ್ ತೊಡಿಸಿದ ನಂತರ ಸಭೆ ಮುಂದುವರೆಯಿತು.**










ಶ್ರೀಮತಿ ಸುಧಾ ಮಾಧವಾಚಾರ್‌ರವರು ಪುರಂದರದಾಸರ ವಿರಚಿತ "ನಮ್ಮಮ್ಮ ಶಾರದೆ ಉಮಾಮಹೇಶ್ವರಿ" ಎಂಬ ಕೃತಿಯೊಂದನ್ನು ಸುಗಮವಾಗಿ ಹಾಡಿ ಪ್ರಾರ್ಥನೆ ಮಾಡಿದರು. ಮಾಜಿ ಅಧ್ಯಕ್ಷರಾದ ರೊ.ಸೆಂಥಿಲ್ ವೇಲನ್‌ರವರು ಸರ್ವರನ್ನು ಸ್ವಾಗತಿಸಿದರು. ಕಾರ್ಯದರ್ಶಿ ರೊ ವಿಶ್ವಾಸ್ ಎಲಬುರ್ಗಿಯವರು ಪ್ರಕಟಣೆ ನೀಡಿದರು. ರೊ. ಎಂ.ಮಾಧವಾಚಾರ್‌ರವರು ಮುಖ್ಯ ಅತಿಥಿಗಳಾದ ಡಾ.ಕೆ.ಎಸ್. ಪವಿತ್ರಾರ ಪರಿಚಯ ಮಾಡಿದರು. ನಿರಂತರ ಪರಿಶ್ರಮದಿಂದಲೇ ತಮ್ಮನ್ನು ವೈದ್ಯಕೀಯ, ನೃತ್ಯ, ಮತ್ತು ಸಾಹಿತ್ಯ ಕ್ಷೇತ್ರಗಳಲ್ಲಿ ಗುರುತಿಸಿಕೊಂಡಿರುವ ಡಾ.ಕೆ.ಎಸ್. ಪವಿತ್ರಾರವರು ವಿಜ್ಞಾನ– ಕಲೆಗಳ ಕ್ಷೇತ್ರದಲ್ಲಿ ಜ್ಞಾನ ಸೇತುವಾಗಿ ಕಾರ್ಯನಿರ್ವಹಿಸುತ್ತಿರುವ ಅಪರೂಪದ ವ್ಯಕ್ತಿ. ವಿದ್ಯಾಭ್ಯಾಸದಲ್ಲಿ 98 ಅಂಕಗಳೊಂದಿಗೆ ಮತ್ತು ತಮ್ಮ ಹದಿನೇಳನೆ ವಯಸ್ಸಿನಲ್ಲಿಯೇ ಭರತನಾಟ್ಯದಲ್ಲಿ ರಾಜ್ಯಕ್ಕೆ 2 ನೇ ರ್‍ಯಾಂಕ್ ಪಡೆದಿರುವ ಇವರು, ಮೈಸೂರು ವೈದ್ಯಕೀಯ ಮಹಾವಿದ್ಯಾಲಯದಿಂದ ಎಂ.ಬಿ.ಬಿ.ಎಸ್ ಪದವಿ, ಅಂತರರಾಷ್ಟ್ರೀಯ ಖ್ಯಾತಿಯ ನಿಮ್ಹಾನ್ಸ್‌ನಿಂದ ಎಂ.ಡಿ. ಮನೋವೈದ್ಯಕೀಯ ಪದವಿ, ಕನ್ನಡ ಎಂ. ಎ. ಸಮೂಹ ಸಂವಹನ ಮುಕ್ತ ಪತ್ರಿಕೋದ್ಯಮ, ನೃತ್ಯ ಚಲನೆಯ ಚಿಕಿತ್ಸೆಯಲ್ಲಿ ಅಂತರರಾಷ್ಟ್ರೀಯ ಡಿಪ್ಲೋಮ ಪದವಿ ಪಡೆದ ಅವರ ಕಾರ್ಯಗಳಿಗೆ ಗಟ್ಟಿಯಾದ ಅಧ್ಯಯನವು ತಳಹದಿಯನ್ನು ಹಾಕಿವೆ. ಮನೋವೈದ್ಯಕೀಯ ಕ್ಷೇತ್ರದಲ್ಲಿ ಹತ್ತು ಹಲವು ಪದವಿ ಪುರಸ್ಕಾರಗಳು, ಫೆಲೋಶಿಪ್‌ಗಳು ಇವರ ಭೌದ್ಧಿಕ ಸಾಮರ್ಥ್ಯದ ನಿದರ್ಶನಗಳು. ವೈದ್ಯೆ, ಕಲಾವಿದೆ– ನೃತ್ಯ ಸಂಯೋಜಕಿ–ಗುರು–ಆಯೋಜಕಿ–ಸಂಶೋಧಕಿ ಹೀಗೆ ಹಲವು ಪಾತ್ರಗಳಲ್ಲಿ ಡಾ.ಕೆ.ಎಸ್. ಪವಿತ್ರಾರವರು ತನ್ಮೂಲಕ ಕಾರ್ಯಕ್ರಮಗಳನ್ನು ನಡೆಸುತ್ತಾ ಮುನ್ನಡೆದಿದ್ದಾರೆ.

## ಈ ವಾರದ ಸಭೆ

**ದಿನಾಂಕ: 20–5–2026, ಬುಧವಾರ** **ಸಂಜೆ 6:45 ರಿಂದ**

**ಅತಿಥಿ:**

**ಪ್ರೊ. ಎನ್. ದಿವಾಕರ್ ರಾವ್**

ವೈಸ್ ಚೇರ್‌ಮನ್, ಭಾರತೀಯ ವಿದ್ಯಾಭವನ, ಶಿವಮೊಗ್ಗ

**ವಿಷಯ:**

**'Youth in Rotary'**

**ದಯವಿಟ್ಟು ರೋಟರಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ**

ಸ್ಥಳ: **ರೋಟರಿ ಯುವ ಕೇಂದ್ರ,** ಸವಳಂಗ ರಸ್ತೆ, ಶಿವಮೊಗ್ಗ







ಡಾ. ಕೆ.ಎಸ್.ಪವಿತ್ರಾರವರು ಮಾತನಾಡುವ ಮೊದಲು ಇತ್ತೀಚೆಗೆ ಅವರು ಪಯಣಿಸಿದ ವಿಮಾನ ರಾಜಾಸ್ಥಾನದ ಜಯಪುರದಲ್ಲಿ ಸಿಲುಕಿಕೊಂಡು ಸಂಚಾರ ವ್ಯತ್ಯಯವಾಗಿ ಪರಿತಪಿಸುತ್ತಿದಾಗ ಮ್ಯಾಥ್ಯೂಡೆಸ್ಮಂಡ್ ಎಂಬ ಲೇಖಕನ “ಎವಿಕ್ಟೆಡ್” ಎಂಬ ಪುಸ್ತಕದ ಬರಹಗಳು ನೆನಪಾದವು. ಜಗತ್ತಿನ ಎಲ್ಲಾ ಭಾಷೆಗಳಲ್ಲಿ ಮನೆ ಎಂಬುದು ಕೇವಲ ಆಶ್ರಯವಷ್ಟೇ ಅಲ್ಲದೇ ಸುರಕ್ಷತೆ ಹಾಗೂ ಬೆಚ್ಚಗಿರುವ ತಾಣ, ಕುಟುಂಬ ಮತ್ತು ತಾಯಿಯ ಗರ್ಭ ಎಂಬ ಭಾವನೆಗಳನ್ನೇ ತರುತ್ತದೆ. ಸಹ ಪ್ರಯಾಣಿಕ ಹೇಳಿದ ಮಾತೆಂದರೆಯಾವಾಗ ಮನೆ ತಲುಪಿ ಹಾಸಿಗೆಯಲ್ಲಿ ನಿದ್ರಿಸುತ್ತೇನೋ ಎಂಬಂತಾಗಿದೆ ಎಂದು ಹೇಳಿದಾಗ. ಒಮ್ಮೆ ಯೋಚಿಸಿ ನೋಡಿದರೆ, ಮನೆ ಎಂದರೆ ನಿಮ್ಮ ಕಣ್ಣ ಮುಂದೆ ತಕ್ಷಣ ಬರುವ ಅಂಶಗಳೇನು? ಮನೆ ಎಂಬುದು ಜೀವನದ ಕೇಂದ್ರ ಎಂಬುದಾಗಿ ಬಿಡುತ್ತದೆ. ನಮ್ಮ ಕೆಲಸಗಳ ಒತ್ತಡಗಳಿಂದ, ಶಾಲೆಯ ಓದಿನ ಭಾರದಿಂದ, ನಮ್ಮ ಹೊರಗಿನ ಓಡಾಟದಿಂದ ನಮಗೆ ‘ನನ್ನತನ’ ಎನ್ನುವ ಅಂಶ ಹುಟ್ಟುವುದು ಅರಳುವುದು ಮನೆಯಿಂದಲೇ. ಮನೆ ನಮಗೆ ಸುರಕ್ಷತಾ ಭಾವ, ಹಾಗೂ ಸ್ವತಂತ್ರದ ಭಾವ ತರುತ್ತದೆ. ನಾವು ನಮ್ಮ ಮನೆಯಲ್ಲಿ ಹೇಗೆ ಬೇಕಾದರೂ ಇರಬಹುದು. ಹೀಗೆಯೇ ಇರಬೇಕೆನ್ನುವ ಕಟ್ಟುಪಾಡುಗಳು ನಮಗೆ ಇರುವುದಿಲ್ಲ. ನಮ್ಮ ಮನೆಯಲ್ಲಿ ನಮಗೆ ಸ್ವಾತಂತ್ರ್ಯವಿದೆ. ಮಕ್ಕಳು ಹೋಮಿ ಅನುಭವಿಸುತ್ತಾರೆ.

ಇವೆಲ್ಲ ಸ್ವಾತಂತ್ರವಿದ್ದರೂ ಮನೆಯ ಲಕ್ಷಣ ನಮ್ಮದೇ ಆಗಿರುತ್ತದೆ. ಆಂಗ್ಲ ಭಾಷೆಯಲ್ಲಿ ಹೌಸ್‌ಗೂ ಹೋಂಗೂ ವ್ಯತ್ಯಾಸಗಳಿವೆ. ಒಂದು ಕುಟುಂಬ ವಾಸಿಸುವ, ಗೃಹಿಣಿಯಿಂದ ಅಲಂಕರಣಗೊಂಡ ಮನೆಯನ್ನು ಹೋಂ ಎಂದರೆ, ಬರೇ ವಾಸಮಾಡುವ ಕಟ್ಟಡಕ್ಕೆ ಹೌಸ್ ಎಂದು ಹೇಳಲಾಗುತ್ತದೆ. ಕನ್ನಡದಲ್ಲಿ ಅಂತಹ ವ್ಯತ್ಯಾಸವಿಲ್ಲ. ಗೃಹಿಣಿಯಾದವಳು ಮನೆಯಲ್ಲಿ ಅಡುಗೆ ಆರೈಕೆ ಮಾಡುತ್ತಾ, ಮನೆಯನ್ನು ಸುಂದರಗೊಳಿಸುತ್ತಾ, ಬಂದವರಿಗೆ ಸ್ವಾಗತಿಸುತ್ತಾ, ಮನೆಯ ಚಟುವಟಿಕೆಗಳಿಗೆ ಹುರುಪು ತುಂಬುತ್ತಾರೆ. ಅದರಿಂದಲೇ ಅವರಿಗೆ ‘ಗೃಹಿಣಿ ಗೃಹ ಮುಚ್ಯತೆ’ ಎನ್ನುವುದು. ವ್ಯಕ್ತಿಗೂ ಕಟ್ಟಡಕ್ಕೂ ಇರುವ ಭಾವನಾತ್ಮಕ ಸಂಬಂಧದಿಂದಲೇ ಅದನ್ನು ಮನೆ ಎಂದು ಗುರುತಿಸಲಾಗುತ್ತದೆ. ನನ್ನತನ ಇರುವುದನ್ನೇ ಮನೆ ಎಂದು ನಮ್ಮ ಮಕ್ಕಳೂ ಗುರುತಿಸಿ ಅದಕ್ಕೊಂದು ಮೆರುಗು ನೀಡುತ್ತಾರೆ. ಅಲ್ಲದೇ ಮಕ್ಕಳು ತೊಂದರೆಯಾದಲ್ಲಿ ಮನೆಯಲ್ಲಿ ಹೇಳಿಕೊಳ್ಳುತ್ತಾರೆ. ಅದರಿಂದಲೇ ಅದಕ್ಕೆ ವಿಶಿಷ್ಟವಾದ ಗುರುತು ಮತ್ತು ವಿಳಾಸದ ತಳಹದಿ ಇರುವುದು. ಆದ್ದರಿಂದ ಈಗ ಎಲ್ಲರೂ ‘I want to go home’ ಎನ್ನುತ್ತಾರೆ ಎಂದರು.

ಮಾನಸಿಕ ಆರೋಗ್ಯದ ದೃಷ್ಟಿಯಿಂದ ನೋಡಿದಲ್ಲಿ ನಾವು ವಾಸಿಸುವ ಮನೆಗೂ, ನಮಗೂ ಪೂರಕವಾದ ಭಾವನಾತ್ಮಕ ಸಂಬಂಧವಿದೆ. ಆದರೆ ಇದನ್ನು ನಾವುಗಳು ಗಮನಿಸುವುದು ಕಡಿಮೆ. ಅದೇ ಮನೆ ಕಳೆದುಕೊಂಡವರಲ್ಲಿ ಖಿನ್ನತೆ, ಅನಾರೋಗ್ಯ ಹೆಚ್ಚಾಗುತ್ತದೆ. ಜೊತೆಗೆ ಇಲ್ಲಿ ಮನೆ ಎಷ್ಟು ದೊಡ್ಡದಿದೆ, ಚಿಕ್ಕದಿದೆ ಎಂಬುದು ಮುಖ್ಯವಲ್ಲ ಎನ್ನುತ್ತಾ ಶಿಶುನಾಳ ಷರೀಫರ ಗೀತೆಯನ್ನು ನೆನಪಿಸುತ್ತಾ, ಮನೆಯಿಲ್ಲದೇ ಇರುವುದು, ಮನೆ ದೊಡ್ಡದಾಗಿರುವುದರಿಂದ ಮನಸ್ಸಿಗೆ ಕ್ಷೋಭೆ ಉಂಟಾಗುತ್ತದೆ. ಮನೆಯು ದೊಡ್ಡದಿದ್ದು ಕೆಲಸದವರು ಬರದಿದ್ದರೆ, ರಜಾ ಹಾಕಿದಲ್ಲಿ ಆತಂಕಗಳು ಉಂಟಾಗುತ್ತದೆ. ದೊಡ್ಡಮನೆಗಳನ್ನು ಕಲ್ಪಿಸಿದ ನಮ್ಮ ಮನೆಗಳಲ್ಲಿ ಮಕ್ಕಳೇ ಇಲ್ಲ. ಅವರು ಉದ್ಯೋಗ ನಿಮಿತ್ತ ಬೇರೆ ಊರಿಗೆ ಹೋಗಿದ್ದಾರೆ. ನಮಗೆ ಅಲ್ಲಿಗೆ ಹೋಗಲಾಗುವುದಿಲ್ಲ. ಪರ ಊರಿನಲ್ಲಿರುವ ಮಕ್ಕಳು ಹೇಳುತ್ತಾರೆ. ನೀವು ಇಲ್ಲಿದ್ದುದು ಸಾಕು. ನಾವಿರುವಲ್ಲೇ ಬಂದು ಬಿಡಿ ಎನ್ನುತ್ತಾರಾದರೂ ತಂದೆ ತಾಯಿಗಳು ಅವರು ಕಟ್ಟಿದ ಮನೆ ಬಿಟ್ಟು ಬರಲಾರರು. ಅಲ್ಲದೇ ಮನೆಯಲ್ಲಿ ಹೆಚ್ಚು ವಸ್ತುಗಳು ತುಂಬುವುದು, ಅದು ಹಳತಾಗುವುದು, ಅದನ್ನು ವಿಲೇವಾರಿ ಮಾಡುವುದು ಇವೆಲ್ಲವೂಗಳು ಇಂದಿನ ಸಮಸ್ಯೆಗಳೇ ಆಗಿದೆ. ಇದಕ್ಕಾಗಿ ರೈತನೊಬ್ಬನ ಕಥೆಯನ್ನು ಅರುಹಿದ ಮುಖ್ಯ ಅತಿಥಿಗಳು ಮನೆಯಲ್ಲಿ ವಸ್ತುಗಳ ಸಂಗ್ರಹ, ಮನೆಯಲ್ಲಿನ ನಮ್ಮ ಮನಸ್ಸು ಇವುಗಳೆಲ್ಲದರ ಬಗ್ಗೆ ಬೆಳಕು ಚೆಲ್ಲಿದರು. ಮನೆಯಲ್ಲಿ ಜಗಳವಿರಲಿ ಏನೆ ಇರಲಿ. ಅದು ಸಹಜ. ಆ ಮನೆಗೆ ಭಾವನಾತ್ಮಕ ಸಂಬಂಧವಿದೆ. ಮನೆ ದೇಹದ ಸುರಕ್ಷತೆಗೆ ಒಂದಕ್ಕೆ ಮಾತ್ರ ಅಲ್ಲ. ಮನಸ್ಸಿನ ಭಾವನೆ ಹೇಗೆ ಕಟ್ಟಿಕೊಳ್ಳಬಹುದು ಎಂಬುದಕ್ಕಾಗಿಯೂ ಇರುತ್ತದೆ. ನಾವುಗಳು ಸಾಲ ಮಾಡಿ ಮನೆ ಕಟ್ಟಿರುತ್ತೇವೆ. ಮಕ್ಕಳು ಚೆನ್ನಾಗಿ ಓದಿ ಉದ್ಯೋಗದಲ್ಲಿರುತ್ತಾರೆ. ಆಗಾಗ ಬರುತ್ತಾರೆ. ಅವರು ತಂದೆ ತಾಯಿಗಳಿಗೆ ತಮ್ಮ ಜೊತೆ ಬನ್ನಿ ಎಂದಾಗ ಅವರುಗಳು ಎಲ್ಲೂ ಹೋಗಲಾಗುವುದಿಲ್ಲ. ಆ ಮನೆಯಲ್ಲಿ ನಮ್ಮ ಭೌತಿಕ ಸ್ಥಿತಿಯಿಂದ ಒಂದು ಪರಿಭಾವನೆ ಬಂದಿರುತ್ತದೆ. ತಾತ್ಕಾಲಿಕ ಮನೆ ಎನ್ನುವಂತಾಗಿದ್ದರೂ ಪುರಂದರದಾಸರ ಅಲ್ಲಿದೆ ನಮ್ಮನೆ ಇಲ್ಲಿ ಇರುವುದು ಸುಮ್ಮನೇ ಎನ್ನುವಂತಾಗುತ್ತದೆ ಎಂದರು. ಮಕ್ಕಳ ಅಸಹಾಯಕತೆಯನ್ನು ನಾವುಗಳು ಪರಿಗಣಿಸಬೇಕಾಗುತ್ತದೆ. ಪರಿವರ್ತನೆ ಜಗದ ನಿಯಮವಾದರೂ, ಪ್ರಸ್ತುತ ಪರಿಸ್ಥಿತಿಯಲ್ಲಿ ಮನಸ್ಸು ಮತ್ತು ಮನಸ್ಸಿನ ಭಾಂದವ್ಯ ಬಹಳ ಮುಖ್ಯವಾಗಿರುತ್ತದೆ.

ಆದ್ದರಿಂದ ಮನೆ ಕಲಹ, ಕೋರ್ಟ್ ವ್ಯಾಜ್ಯಗಳು, ತಂದೆ–ತಾಯಿಯರ ಕಲಹಗಳು ಇವೆಲ್ಲವುದಕ್ಕೆ ಸುರಕ್ಷಿತತೆ ಬೇಕೆಂದರೆ ಎಲ್ಲವುದೂ ಒಂದು ಮಿತಿಯಲ್ಲಿರಬೇಕು. ಇಂದಿನ ಜಗತ್ತು ಬಹು ಒತ್ತಡದಿಂದ ಕೂಡಿದೆ. ಅದನ್ನು ಸಂಭಾಳಿಸಿಕೊಂಡು ಒಂದಷ್ಟು ಬದಲಾವಣೆಯನ್ನು ನಮ್ಮಲ್ಲಿ ಮಾಡಿಕೊಂಡಲ್ಲಿ ಮನೆ ಮನ ಸುಲಲಿತವಾಗಿರುತ್ತದೆ ಎಂದು ಅಭಿಪ್ರಾಯಪಟ್ಟರು.

ಕ್ಲಬ್‌ನ ಮಾಜಿ ಅಧ್ಯಕ್ಷರಾದ ರೊ.ಕಿಶೋರ್ ಶೀರನಾಳಿಯವರು ಮಾತನಾಡಿ, ಮನೆ ನಮ್ಮಿಷ್ಟದ್ದಾಗಿರಬೇಕು ಎಂದು ಹಿರಿಯರು ಹೇಳುತ್ತಾರೆ. ಅದಕ್ಕೆ ಪೂರಕವಾಗಿ ಮಾತನಾಡಿದ ಮುಖ್ಯ ಅತಿಥಿಗಳು, ಮನೆಯಲ್ಲಿ ನಮಗೆ ಪೂರ್ಣಸ್ವಾತಂತ್ರ್ಯವಿದೆ. ನಮ್ಮ ಕೋಣೆಗಳನ್ನು ಹೇಗೆ ಬೇಕಾದರೂ ಇಟ್ಟುಕೊಳ್ಳಬಹುದು. ವಸ್ತುಗಳು ಹರಡಿ ಕೊಂಡಿದ್ದರೂ ಪರವಾಗಿಲ್ಲ. ಆದರೂ ನಾವು ಸ್ವಚ್ಛತೆಗೆ ಒತ್ತುಕೊಡಬೇಕು ಎಂದರು.

**ನೀವು ಅತ್ಯುತ್ತಮ ರೋಟರಿ ಸದಸ್ಯರೆಂದಾದರೆ ಪ್ರತಿ ವಾರದ ಸಭೆಗೆ ತಪ್ಪದೇ ಬನ್ನಿ**




ಮಾಜಿ ಅಧ್ಯಕ್ಷರಾದ ರೊ.ಸೆಂಥಿಲ್ ವೇಲನ್‌ರವರು ಮಾತನಾಡಿ, ನಾವು ಹೊರಗಡೆಯಿಂದಾಗ ಮನೆಗೆ ಬಂದಾಗ ಎಲ್ಲದು ಸರಿಯಾಗಿರಬೇಕು ಎಂದುಕೊಂಡು ಬರುತ್ತೇವೆ. ಅದು ಸಮರ್ಪಕವಾಗಿ ಇಲ್ಲದಿದ್ದಲ್ಲಿ ಕೋಪ ಮಾಡಿಕೊಂಡು ಜಗಳವಾಡುತ್ತೇವೆ. ಸಮಯಕ್ಕೆ ಬಹಳ ಬೆಲೆ ಕೊಡುತ್ತೇವೆ. ಸಮಯ ಬಂದಾಗ ವಸ್ತುಗಳು ನಮಗೆ ದೊರಕಬೇಕು ಎಂದುಕೊಳ್ಳುತ್ತೇವೆ. ಸಿಗದಿದ್ದಾಗ ಕೋಪ ಬರುತ್ತದೆ ಎಂದಾಗ ಉತ್ತರಿಸಿದ ಮುಖ್ಯ ಅತಿಥಿಗಳು, ಮನೆಯಲ್ಲಿ ನಿಮ್ಮ ತುಂಬಾ ಕಠೋರವಾದ ಶಿಸ್ತು ಕೆಲವೊಮ್ಮೆ ನಿಮ್ಮ ಸಂಯಮವನ್ನು ಹಾಳು ಮಾಡುತ್ತದೆ. ಆದ್ದರಿಂದ ನೀವು ಕೂಡ ಸಂಯಮದಿಂದ ಪೂರಕವಾಗಿ ನಿಮ್ಮ ಸಹಕಾರ ಮನೆಯವರಿಗೆ ನೀಡಬಹುದು ಎಂದರು.

ಪಿಹೆಚ್‌ಎಫ್.ಜಿ. ಸತ್ಯನಾರಾಯಣರವರು ಮಾತನಾಡಿ, ತಂದೆ ತಾಯಿಗಳ ಬಗ್ಗೆ ಗೌರವವಿಲ್ಲದೇ ಅವರ ಮೇಲೆ ದೈಹಿಕ ಹಲ್ಲೆಯಾದಂತಹ ಅನೇಕ ಪ್ರಸಂಗಗಳಿರುವಾಗ ಮನೆ ಮನದಂತ ಮಾತುಗಳು ಹೇಗೆ ಕಾರ್ಯನಿರತವಾಗುತ್ತದೆ ಎಂದು ಕೇಳಿದ ಪ್ರಶ್ನೆಗೆ ಉತ್ತರಿಸಿದ ಮುಖ್ಯ ಅತಿಥಿ ಡಾ.ಕೆ.ಎಸ್. ಪವಿತ್ರಾರವರು, ಇದು ಆಸ್ತಿ ಹಂಚಿಕೆಯಲ್ಲಿ, ಮತ್ತಿತರ ಕಾರಣಗಳಲ್ಲಿ ಸಂಭವಿಸುವ ಕೃತ್ಯಗಳು. ಇವು ಒಪ್ಪತಕ್ಕದ್ದಲ್ಲವಾದರೂ, ಮನೆಯವರನ್ನೆಲ್ಲಾ ಒಟ್ಟಿಗೆ ಸೇರಿಸಿ ಅದಕ್ಕೊಂದು ಪರಿಹಾರ ಕಂಡುಕೊಳ್ಳುವುದು ಒಳ್ಳೆಯದು. ಇತಿಹಾಸದಿಂದ ನಾವು ಕಲಿತಿರುವುದೇನೆಂದರೆ, ಆಸ್ತಿ ಹಂಚಿಕೆ ವಿಷಯಗಳು ಇವೆಲ್ಲಾ ಹಳೆಯ ವಿಷಯಗಳು, ಆದರೆ ನಮ್ಮ ಅಸ್ತಿತ್ವವಿರುವವರೆಗೆ ಆಸ್ತಿಯ ಭಾಗ ಮಾಡುವುದು ಸರಿಯಲ್ಲ. ನಮ್ಮ ಮಕ್ಕಳು ಒಳ್ಳೆಯವರೇ ನಿಜ. ಆದರೆ ಅವರುಗಳ ಮೇಲೆ ಪೋಷಕರ ಅವಲಂಬನೆ ಸಲ್ಲ ಎಂಬ ಯೋಚನೆ ಪೋಷಕರಿಗೆ ಇರಬೇಕು. ಕುಟುಂಬದ ಸದಸ್ಯರುಗಳು ಭಾವನೆಗಳನ್ನು ನಿಯಂತ್ರಿಸಿ ಚರ್ಚೆ ಮಾಡಿ ಪರಿಹಾರ ಕಂಡುಕೊಳ್ಳುವುದು ಸೂಕ್ತ ಎಂದರು.

ಅಧ್ಯಕ್ಷರಾದ ರೊ.ಆರ್. ಆನಂದರವರು ಮಾತನಾಡಿ, 'ಮನೆಯೇ ಮಂತ್ರಾಲಯ–ಮನಸೆ ದೇವಾಲಯ' ಎನ್ನುತ್ತಾರೆ. ಹಾಗೆಯೇ ಹೆಚ್.ಎಸ್.ವಿ.ಯವರು ಇರಬೇಕು 'ಇರುವಂತೆ ತೊರೆದು ಸಾವಿರಚಿಂತೆ ಮಳೆ ಸುರಿಸಿ ಹಗುರಾದ ಮುಗಿಲಿನಂತೆ' ಎಂಬಂತೆ ಮನೆ ಸ್ವಚ್ಛವಾಗಿಟ್ಟುಕೊಂಡಷ್ಟು ನಮ್ಮ ಮನಸ್ಸು ಪ್ರಫುಲ್ಲವಾಗಿರತ್ತೆ ಎಂಬುದು ನನ್ನ ವೈಯಕ್ತಿಕ ನಂಬಿಕೆ. ಮುಖ್ಯ ಅತಿಥಿಗಳು ಮನೆ – ಮನ ಎಂಬ ವಿಷಯದಲ್ಲಿ ಹಲವಾರು ಅಂಶಗಳ ಬಗ್ಗೆ ಮಾತನಾಡಿ ಬೆಳಕು ಚೆಲ್ಲಿದ್ದೀರಿ ಅದಕ್ಕಾಗಿ ವಂದನೆಗಳು ಎಂದು ತಿಳಿಸಿ ಕೃತಜ್ಞತಾ ಪೂರ್ವಕವಾಗಿ ನೆನಪಿನ ಕಾಣಿಕೆ ನೀಡಿ ಗೌರವಿಸಿದರು. ಕೊನೆಯಲ್ಲಿ ಕಾರ್ಯದರ್ಶಿ ರೊ.ವಿಶ್ವಾಸ್ ಎಲಬುರ್ಗಿಯವರು ವಂದನಾರ್ಪಣೆ ಮಾಡಿದರು.

**ಸದಸ್ಯರುಗಳಿಂದ ಕ್ಲಬ್‌ನ ವಿಶ್ವಮಿತ್ರ ಪತ್ರಿಕೆಗೆ ಲೇಖನಕ್ಕೆ ಆಹ್ವಾನ**

2026–27 ನೇ ಸಾಲಿಗೆ ಆಹಾರ, ಆರೋಗ್ಯ, ಆಧ್ಯಾತ್ಮ ಮತ್ತು ಅವಲೋಕನ ಎಂಬ ವಿಷಯದ ಮೇಲೆ ಪ್ರತೀ ವಾರದಲ್ಲಿಯೂ ಸತತವಾಗಿ ಲೇಖನಗಳನ್ನು ಕಳುಹಿಸಿಕೊಡಬಹುದು. ಸೂಕ್ತವಾದದನ್ನು ಕಂಡು ಪ್ರಕಟಿಸಲಾಗುವುದು. (ಲೇಖನ ಹದಿನೈದು ವಾಕ್ಯಗಳಿಗೆ ಮೀರಿರಬಾರದು.)

MAY




## 11. Youth Service Month

- Arrange Holiday/ Summer Camps for school children filled with meaningful and productive work activities.
- Involve Interactors and Rotaractors in service projects.
- Awareness campaign about problems and need for survival of future generations.
- Arrange Skill Development Training camps. EN

## THE OBJECT OF ROTARY

The Object of Rotary is to encourage and foster the ideals of service as a basis of worthy enterprise and in particular, to encourage and foster:

**01 FIRST**
The development of acquaintance as an opportunity for service;

**02 SECOND**
High ethical standards in business and professions; the recognition of the worthiness of all useful occupations; and the dignifying of each Rotarian's occupation as an opportunity to serve society;

**03 THIRD**
The application of the ideal of service in each Rotarian's personal, business/professional, and community life;

**04 FOURTH**
The advancement of international understanding, goodwill, and peace through a world fellowship of business and professional persons united in the ideal of service.



ಸಂಪಾದಕೀಯ

## ಆಮಂತ್ರಣ...!

ಮೊನ್ನೆ ಸಮಾರಂಭವೊಂದಕ್ಕೆ ಹೋಗಿದ್ದೆ. ಮುಗಿಸಿ ಹೊರಬರುವಷ್ಟರಲ್ಲಿ ಪರಿಚಿತರೊಬ್ಬರು ಮಾತಿಗೆ ಸಿಕ್ಕರು. ಅವರ ಕೈಯಲ್ಲಿ ಮೂರು ನಾಲ್ಕು ಆಮಂತ್ರಣ ಪತ್ರಿಕೆಗಳು ಕಣ್ಣಿಗೆ ಬಿದ್ದವು. "ಇಷ್ಟೆಲ್ಲ ಆಮಂತ್ರಣ ಪತ್ರಿಕೆಗಳು ಹೇಗೆ ದೊರೆತವು" ಎಂದು ಪ್ರಶ್ನಿಸಿದೆ. "ಈಗೆಲ್ಲ ಹೀಗೆ ನಡೆಯುವುದಲ್ಲವೇ, ಒಬ್ಬರು ಮಗಳ ಮದುವೆಯ ಪತ್ರಿಕೆ ಕೊಟ್ಟರು. ಇನ್ನೊಬ್ಬರು ಗೃಹಪ್ರವೇಶದ ಆಮಂತ್ರಣ ಕೊಟ್ಟರು. ಅಂತಹ ಬಟವಾಡೆಗಳನ್ನು ಇಲ್ಲೇಕೆ ಮಾಡುತ್ತಾರೆ? ಕೊನೆಯ ಪಕ್ಷ ಮಗಳ ಮದುವೆಯ ಆಮಂತ್ರಣ ಮನೆಗೆ ಬಂದು ಮಾಡಬೇಕಲ್ಲವೇ? ಎಂದೆ. ನೀವು ಯಾವ ಕಾಲದಲ್ಲಿದ್ದೀರಿ? ಈಗೆಲ್ಲ ಸಂಕ ಮುರಿದಲ್ಲೇ ಸ್ನಾನ ಎಂಬಂತಾಗಿದೆ. ಕೆಲವರಿಗೆ ಮನೆಯ ವಿಳಾಸ ತಿಳಿಯದಂತೆ. ಇನ್ನು ಕೆಲವರು ಅವಸರ ಕಾರ್ಯಕ್ರಮ ಇಟ್ಟುಕೊಂಡಿದ್ದು, ಸಮಯದ ಅನುಕೂಲವಿಲ್ಲವಂತೆ, ಇಲ್ಲೇ ಕೊಟ್ಟರೆ ನಿಮಗೆ ಬೇಸರವಿಲ್ಲ ತಾನೇ ಎಂದು ಕೇಳಿದರು. ನಾನೇನನ್ನಲಿ? ಮನೆಗೇ ಬಂದು ಕೊಡಿ ಅನ್ನಲೇ? ಇವರು ಇಷ್ಟಾದರೂ ಮುಖತಃ ಕೊಟ್ಟರಲ್ಲ? ಕೆಲವರು ಮೊಬೈಲಿಗೆ ಪತ್ರಿಕೆ ರವಾನಿಸಿ ಸುಮ್ಮನೆ ಕೂರುತ್ತಾರೆ. ಕೊನೆಪಕ್ಷ ಕರೆಮಾಡಿ ತಿಳಿಸಬೇಕೆಂಬ ಕನಿಷ್ಠ ಸೌಜನ್ಯ ಕೂಡ ಇರಲ್ಲ" ಎಂದರು.


ಮದುವೆಯ ಆಮಂತ್ರಣವನ್ನು ಮನೆಬಾಗಿಲಿಗೆ ಹೋಗಿ ನೀಡುವುದು ಎಷ್ಟೊಂದು ಅರ್ಥಪೂರ್ಣ, ಪ್ರೀತಿತುಂಬಿದ, ವಿಶ್ವಾಸ ವೃದ್ಧಿಸುವ, ಸ್ನೇಹ-ಬಾಂಧವ್ಯವನ್ನು ಮುಂದುವರಿಸುವ ಸತ್ ಸಂಪ್ರದಾಯ ಎಂದು ಏಕೆ ತಿಳಿಯುವುದಿಲ್ಲ? ಹಿಂದೆಲ್ಲ ಸಮುದಾಯದಲ್ಲೊಂದು ಮದುವೆ ಇದೆ ಅಂದರೆ ಆ ಸುದ್ದಿ ಊರೆಲ್ಲ ಹಬ್ಬುತ್ತಿತ್ತು. ನಮಗೆ ಹೇಳಿಕೆ ಇರಬಹುದೇ? ನಮ್ಮಲ್ಲಿಗೆ ಕರೆಯಲು ಎಂದು ಬಂದಾರು? ದಿನ ಹತ್ತಿರ ಬಂತಲ್ಲ? ಎಂದು ಕನವರಿಸುತ್ತಿದ್ದರು. ಮದುವೆ ಮನೆಯವರು ಬಂದರೆಂದರೆ ಎಂಥ ಸಂಭ್ರಮ, ಎಷ್ಟೊಂದು ಆನಂದ! ಅವರ ಕಾಲಿಗೆ ನೀರು ಕೊಡುವುದೇನು, ಕುಡಿಯಲು ಬಾಯಾರಿಕೆ ನೀಡುವುದೇನು, ಮನೆಮಂದಿಯೆಲ್ಲ ಬಂದವರ ಸುತ್ತ ನೆರೆಯುವುದೇನು? ಅದೆಂತಹ ನೋಟ! ಬಂದವರು ಕೂಡ ಈಗಿನಂತೆ ಸಾಮಾನ್ಯವಾಗಿ ಕುದುರೆ ಏರಿ ಬರುವುದಿಲ್ಲ. ಒಂದು ಗಳಿಗೆ ಕೂತು, ಸಂಕ್ಷಿಪ್ತವಾಗಿಯಾದರೂ ಒಂದೆರಡು ಮಾತಾಡಿ ಎದ್ದು ನಿಂತು ಮನೆಯ ಹಿರಿಯರ ಕೈಗೆ ಆದರಪೂರ್ವಕವಾಗಿ ಆಮಂತ್ರಣ ಪತ್ರಿಕೆ ನೀಡುತ್ತಾರೆ. ಅದರಲ್ಲೊಂದು ಪ್ರೀತಿ, ಗೌರವದ ಸೆಲೆ ಇರುತ್ತಿತ್ತು. ವಿಶ್ವಾಸದಿಂದ, ಒಲುಮೆಯಿಂದ ಕರೆಯುತ್ತಾರೆ. ಆಮಂತ್ರಣ ಪಡೆದವರೂ ಅಷ್ಟೇ ಜತನದಿಂದ ಪತ್ರಿಕೆಯನ್ನು ಎತ್ತಿಟ್ಟು, ವಿಶ್ವಾಸದ ನಾಲ್ಕು ಮಾತಾಡಿ ಬೀಳ್ಕೊಡುತ್ತಾರೆ. ಇದು ನಾನು ಎಳವೆಯಲ್ಲಿ ನೋಡಿದ ದೃಶ್ಯ. ಬರಬರುತ್ತಾ ಎಂಥಹ ಬದಲಾವಣೆಗಳಾದವು ನೋಡಿ. ಬಂಧುಗಳ, ಮಿತ್ರರ ಮನೆಗಳಿಗೆಲ್ಲ ನಾವು ಆಗಾಗ ಹೋಗಿ ಬರುತ್ತೇವೆಯೋ? ಮದುವೆ ಆಮಂತ್ರಣ ನೀಡುವ ಮೂಲಕವಾದರೂ ಅವರ ಮನೆಗೆ ಒಮ್ಮೆ ಭೇಟಿ ಕೊಟ್ಟಂತೆ ಆಗುತ್ತದೆ. ನೀವು ಮನೆಗೇ ಹೋಗಿ ಆಮಂತ್ರಿಸಿದರೆ ಅವರು ಯಾವ ಕಾರಣಕ್ಕೂ ಗೈರಾಗುವುದಿಲ್ಲ. ಅಲ್ಲದೆ ನಿಮ್ಮ ನಡುವಿನ ಸ್ನೇಹ, ಬಂಧುತ್ವವೂ ಬೆಳೆಯುತ್ತದೆ. ನಿಮಗೂ ಅವರ ಮನೆಯನ್ನು ಖುದ್ದಾಗಿ ನೋಡಲೊಂದು ಅವಕಾಶ. ನಾವ್ಯಾಕೆ ಈ ರೀತಿ ಯೋಚಿಸುವುದಿಲ್ಲ? ಮುಂದೊಂದು ದಿನ ಮನೆಗೆ ಬಂದು ಆಮಂತ್ರಿಸುವ ಸಂಪ್ರದಾಯವೇ ನಾಶವಾಗುತ್ತದೆ. ಅದರಿಂದ ನಮಗೇ ನಷ್ಟ, ನಾವು ಯಾಂತ್ರಿಕವಾದಷ್ಟು ಪ್ರೀತಿ, ವಿಶ್ವಾಸ, ಸ್ನೇಹ ಎಂಬ ಭಾವಗಳು ನಲುಗುತ್ತವೆ. ಟೆಕ್ನಾಲಜಿ ಎಷ್ಟೇ ಮುಂದುವರಿಯಲಿ, ನಮ್ಮಲ್ಲಿ ಎಷ್ಟೇ ಸಂಪತ್ತಿರಲಿ, ಪ್ರೀತಿ ಸ್ನೇಹಕ್ಕೆ ಅವು ಪರ್ಯಾಯ ಆಗಬಾರದು ಅಲ್ಲವೇ...?

• **ರೊ. ಎಂ. ಮಾಧವಾಚಾರ್**

## ಜನ್ಮ ದಿನದ ಶುಭಾಶಯಗಳು



*Sadanand D. V.*
*15th May*



*Pete Ajay Kumar*
*19th May*




*T.R. Aswathnarayan*
*20th May*



*Renuka Srinath*
*20th May*

### ಅಂತರರಾಷ್ಟ್ರೀಯ ವಿಶ್ವಕುಟುಂಬ ದಿನದ ಪ್ರಯುಕ್ತ
### ಕುಟುಂಬ ವ್ಯವಸ್ಥೆ ಬಗ್ಗೆ ಎರಡು ಮಾತು


ಕುಟುಂಬ ಎಂದರೆ ಅದು ಕೇವಲ ಸದಸ್ಯರ ಸಮೂಹವಲ್ಲ. ಸಂಸ್ಕಾರ, ಮೌಲ್ಯಗಳು ಪೀಳಿಗೆಯಿಂದ ಪೀಳಿಗೆಗೆ ವರ್ಗವಾಗಿ ಸಂಸ್ಕೃತಿಯ ಪ್ರವಾಹವನ್ನು ಅವಿಚ್ಛಿನ್ನವಾಗಿ ಕಾಪಿಡುವ ಮಹೋನ್ನತ ಪರಂಪರೆಯನ್ನು ಕುಟುಂಬಗಳು ಅತ್ಯಂತ ಯಶಸ್ವಿಯಾಗಿ ನಿರ್ವಹಿಸಿಕೊಂಡು ಬಂದಿವೆ. ವಿಶ್ವಕುಟುಂಬ ದಿನದ ನಿಮಿತ್ತ ಮೌಲ್ಯಗಳು, ಸಾಮರಸ್ಯ, ಸದ್ಭಾವನೆ ಬಗೆಗಿನ ಚಿಂತನೆಗಳು ಕುಟುಂಬದ ವ್ಯವಸ್ಥೆಯ ಮೇಲೆ ನಿಜಕ್ಕೂ ಹೊಸ ಬೆಳಕು ಬೀರುತ್ತದೆ.






### ಮುದ್ದುರಾಮನ ಚೌಪದಿ...

ಬಾನಿಗೇಣಿಯ ಹಾಕಿ ಬಿದ್ದು ನರಳುವುದೇಕೋ ?
ಸೋತು ಜೂಜಿನಲಿ ತಲೆತಗ್ಗಿಸುವುದೇಕೋ ?
ಮಾಡಬಾರದುದೆಸಗಿ ನೋವಿಗೊರಗುವುದೇಕೋ ?
ನೆಮ್ಮದಿಯೆ ತವನಿಧಿಯೋ – ಮುದ್ದುರಾಮ.




To,

*Book Post*

ಮುದ್ರಣ: ರಾಯಲ್ ಪ್ರಿಂಟರ್ಸ್, ಶಿವಮೊಗ್ಗ, 98862 73495